UASB Library
Newspaper Clippings
Monday 26.09.2022 Pg .1
Jai Kisan



ಕೆಂಪಡಕೆ ದರ ಕ್ವಿಂಟಾಲ್‌ಗೆ 5 ಸಾವಿರ, ಚಾಲಿಗೆ 3 ಸಾವಿರ ರೂ.ಕುಸಿತ

ಅಡಕೆ ದರ ಏರಿಳಿತ

■ ಕಂಚಿಕೈ ವಿರುಪಾಕ್ಷ ಹೆಗಡೆ ಶಿರಸಿ
viroopaksh.hegde@timesgroup.com

ತಿಂಗಳ ಹಿಂದೆ ಗಣೇಶ ಚೌತಿ ಹಬ್ಬದ ಸಂದರ್ಭದಲ್ಲಿ ಏರಿಕೆ ಆಗುತ್ತಾ ಬಂದಿದ್ದ ಅಡಕೆ ದರ ಕಳೆದ ವಾರದಿಂದ ಮತ್ತೆ ಇಳಿಕೆ ಆಗುತ್ತಿದೆ. ಉತ್ತಮ ದರಕ್ಕಾಗಿ ಅಡಕೆ ದಾಸ್ತಾನು ಮಾಡಿದ್ದ ಬೆಳೆಗಾರರಿಗೆ ಈ ಏರಿಳಿತ ಗೊಂದಲ ಮೂಡಿಸಿದೆ.

ಅಡಕೆಯ ಪ್ರಮುಖ ಪ್ರಕಾರವಾದ ರಾಶಿ ಅಥವಾ ಕೆಂಪಡಕೆ ದರ ಈ ವಾರದಲ್ಲಿ ಕ್ವಿಂಟಾಲ್‌ಗೆ 5,000 ರೂ.ಗಳಷ್ಟು ಕಡಿಮೆಯಾಗಿದೆ. ಇನ್ನೊಂದು ಪ್ರಮುಖ ಪ್ರಕಾರವಾದ ಚಾಲಿ ಅಡಕೆಯ ದರ ಕ್ವಿಂಟಾಲ್‌ಗೆ ಮೂರು ಸಾವಿರ ರೂ.ಗಳಷ್ಟು ಇಳಿಕೆ ಆಗಿದೆ. ಆದರೆ ಬೆಳೆಗಾರರಿಗೆ ಈ ಸಂದರ್ಭದಲ್ಲಿ ದರ ಮತ್ತೆ ಇಳಿಕೆಯಾಗುವ ನಿರೀಕ್ಷೆ ಇರಲಿಲ್ಲ.

ಎಷ್ಟು ವ್ಯತ್ಯಾಸ?: ವಾರಾಂತ್ಯಕ್ಕೆ ಕೆಂಪಡಕೆ ಕನಿಷ್ಠ -ಗರಿಷ್ಠ ದರ 47,000-50,500 ರೂ.ಗಳಷ್ಟು ಲಭ್ಯವಾಗಿದ್ದರೆ, ಚಾಲಿ ಅಡಕೆ ದರ 40,000-43,500 ರೂ.ಗಳಿಗೆ ಮಾರಾಟವಾಗುತ್ತಿದೆ.

ಕಳೆದ ಒಂದೂವರೆ ತಿಂಗಳ ಹಿಂದೆ ಇದೇ ದರ ಲಭ್ಯವಾಗುತ್ತಿತ್ತು. ಆದರೆ ಚೌತಿ ಹಬ್ಬದ ಸಂದರ್ಭದಲ್ಲಿ ಪ್ರತಿದಿನ ಸ್ವಲ್ಪ ಸ್ವಲ್ಪ ಏರಿಕೆ ಆಗುತ್ತ ಬೆಳೆಗಾರರಲ್ಲಿ ಹೊಸ ನಿರೀಕ್ಷೆ ಮೂಡಿಸಿತ್ತು. ಹೀಗೆ 15 ದಿನಗಳ ಅವಧಿಯಲ್ಲಿ ಕೆಂಪಡಕೆ ದರ ಕ್ವಿಂಟಾಲ್‌ಗೆ ನಾಲ್ಕೈದು ಸಾವಿರ ರೂ.ಮತ್ತು ಚಾಲಿ ಅಡಕೆ ದರ ಮೂರ್ನಾಲ್ಕು ಸಾವಿರ ರೂ. ತೇಜಿ ಕಂಡು ಬಂದಿತ್ತು. ಕೆಂಪಡಕೆ ಗರಿಷ್ಠ ದರ 55 ಸಾವಿರ ರೂ.ಗಳಿಗೆ ಸಮೀಪಿಸಿದ್ದರೆ, ಚಾಲಿ ಅಡಕೆ ದರ 45 ಸಾವಿರ ರೂ.ಗಳಿಗೆ ತಲುಪಿತ್ತು.

ಆದರೆ, ಹೀಗೆ ದಿಢೀರ್ ಏರಿಕೆಯಾದ ದರ ಬೆಳೆಗಾರರಲ್ಲಿ ಮಂದಹಾಸ ಮೂಡಿಸಿದರೆ, ಇನ್ನಷ್ಟು ಕೃಷಿಕರು ಮತ್ತಷ್ಟು ದರ ಹೆಚ್ಚಳ ಆಗಬಹುದು ಎಂಬ ನಿರೀಕ್ಷೆಯಲ್ಲಿ ಇದ್ದರು. ಅದರಲ್ಲೂ ನವರಾತ್ರಿ ಹಾಗೂ ನಂತರದ ದೀಪಾವಳಿ ಹಬ್ಬಗಳ ಹಂಗಾಮ ಆಗಿದ್ದರಿಂದ ಅಡಕೆಗೆ ಹೆಚ್ಚು ಬೇಡಿಕೆ ಬಂದು ದರ ಕೂಡ ಹೆಚ್ಚಳ ಆಗಬಹುದು ಎಂಬ ಆಸೆ ಮೂಡಿಸಿತ್ತು ಎನ್ನುತ್ತಾರೆ ಬೆಳೆಗಾರರು.

ಮತ್ತೆ ನಿರಾಸೆ: ಈ ಮಧ್ಯೆ, ಮತ್ತಷ್ಟು ತೇಜಿ ಆಗುವುದು ಬದಿಗಿರಲಿ, ಏರಿಕೆಯಾದ ದರ ಸ್ಥಿರವಲ್ಲ ಎನ್ನುವಂತೆ ಈಗ ಮತ್ತೆ ಇಳಿಮುಖವಾಗಿದೆ. ಆಸೆ ಪಟ್ಟ ಬೆಳೆಗಾರರು ಈಗ ನಿರಾಸೆ ವ್ಯಕ್ತಪಡಿಸುತ್ತಿದ್ದಾರೆ.

ಎಷ್ಟು ದಾಸ್ತಾನು?

ಈಗ ಅಡಕೆ ಉತ್ಪಾದನೆ ಮತ್ತು ಮಾರಾಟದ ಹಂಗಾಮು ಅಲ್ಲ, ಆದರೆ ಉತ್ತಮ ದರ ಸಿಗಬಹುದು ಎಂದು ಅನೇಕ ಬೆಳೆಗಾರರು ದಾಸ್ತಾನು ಮಾಡಿದ್ದಾರೆ. ಹೀಗೆ ಸದ್ಯಕ್ಕೆ ಕೆಂಪಡಕೆ ಶೇ.10ರಷ್ಟು ಮತ್ತು ಚಾಲಿ ಅಡಕೆ ಶೇ.40ರಷ್ಟು ದಾಸ್ತಾನು ಇದೆ ಎಂದು ಅಂದಾಜಿಸಲಾಗಿದೆ. ಇಂಥವರು ದರ ಮತ್ತೆ ಏರಿಕೆ ಆಗಬಹುದೇ ಇಲ್ಲವೇ ಈಗಲೇ ಮಾರಾಟ ಮಾಡುವುದೇ ಎಂಬ ಗೊಂದಲದಲ್ಲಿ ಇದ್ದಾರೆ.



ಉತ್ತರ ಭಾರತ ಸೇರಿದಂತೆ ಅಡಕೆ ಬಳಕೆ ಮಾರು ಕಟ್ಟೆ ಪ್ರದೇಶದ ಬೇಡಿಕೆಯನ್ನು ಅವಲಂಬಿಸಿಯೂ ದರ ಏರಿಳಿತ ಆಗುತ್ತದೆ. 15 ದಿನಗಳ ಹಿಂದೆ ಗರಿಷ್ಠ ದರ ಲಭ್ಯವಾಗಿತ್ತು. ಅದಕ್ಕಿಂತ ಹೆಚ್ಚಿನ ದರದ ನಿರೀಕ್ಷೆ ನಿಜವಾಗುವ ಲಕ್ಷಣಗಳು ಕಂಡು ಬರುತ್ತಿಲ್ಲ.
-ಲೋಕೇಶ ಹೆಗಡೆ ಹಿರಿಯ ವರ್ತಕ

ಏಕ ವಿಶೇಷ

ಹೊಸ ಕೊಯ್ಲಿನ ಅಡಕೆ ಆವಕಕ್ಕೆ ಮಾರುಕಟ್ಟೆ ಸಿದ್ಧ

■ ಸುಧಾಕರ ಸುವರ್ಣ ಪುತ್ತೂರು
sudhakara.kannadamoole@timesgroup.com

ಚಾಲಿ ಬಳಿ ಅಡಕೆ ಮಾರುಕಟ್ಟೆಯಲ್ಲಿ ಹೊಸ ಅಡಕೆ, ಹಳೆ ಅಡಕೆಗೆ ಉತ್ತಮ ಧಾರಣೆ ಇದ್ದು, ಇತರೆಲ್ಲ ಬೆಳೆಗಳಿಗಿಂತ ಅಡಕೆ ಬೆಳೆಗಾರರು ತಕ್ಕ ಮಟ್ಟಿಗೆ ಸಂತೃಪ್ತಿಯಲ್ಲಿದ್ದಾರೆ. ಈ ನಡುವೆ, ನವರಾತ್ರಿ ಮುಗಿಯುತ್ತಲೇ ಮಾರುಕಟ್ಟೆಗೆ ಹೊಸ ಕೊಯ್ಲಿನ ಅಡಕೆ ಆವಕವಾಗುವ ಸಾಧ್ಯತೆ ಇದ್ದು, ಕೆಲವೇ ದಿನಗಳಲ್ಲಿ ಕ್ಯಾಂಪ್ಕೊ ಸೇರಿದಂತೆ ಮಾರುಕಟ್ಟೆ ಸಂಸ್ಥೆಗಳು ದರ ನಿಗದಿ ಮಾಡಲಿವೆ. ಬೆಳೆಗಾರರ ಚಿತ್ತ ಈಗ ಹೊಸ ಕೊಯ್ಲಿನ ಧಾರಣೆ ಮೇಲೆ ನೆಟ್ಟಿದೆ.

ಪ್ರಸ್ತುತ ಹೊಸ ಅಡಕೆಗೆ ಕೆಜಿಗೆ 475 ರೂ. ಇದೆ. ಹಳೆ ಅಡಕೆ ಸಿಂಗಲ್ ಚೋಲ್ ಮತ್ತು ಡಬ್ಬಲ್ ಚೋಲ್‌ಗೆ ತಲಾ 560 ರೂ. ಧಾರಣೆ ಇದೆ. ಕೆಲವು ಕಡೆ ಖಾಸಗಿ ವ್ಯಾಪಾರಸ್ಥರು ಹೊಸ ಅಡಕೆಯನ್ನು 590 ರೂ.ವರೆಗೂ ಖರೀದಿಸುತ್ತಿದ್ದಾರೆ. ಅಡಕೆ ಮಾರುಕಟ್ಟೆಯ ಇತಿಹಾಸದಲ್ಲೇ ಹೊಸ ಮತ್ತು ಹಳೆ ಅಡಕೆಗೆ ಇಷ್ಟೊಂದು ಭರ್ಜರಿ ಧಾರಣೆ ಇದೇ ಮೊದಲ ಬಾರಿ ಬಂದಿದೆ. ಕಳೆದ ಹಲವು ತಿಂಗಳುಗಳಿಂದ ಇದೇ ಧಾರಣೆ ಸ್ಥಿರವಾಗಿ ಮುಂದುವರಿದಿದೆ.

ಹೊಸ ಕೊಯ್ಲು ಸನ್ನಿಹಿತ: ಕಳೆದ ಸಾಲಿನಲ್ಲಿ ಅಂದರೆ 2021ರ ನವೆಂಬರ್‌ನಿಂದ 2022ರ ಏಪ್ರಿಲ್ ವರೆಗೆ ಸುಮಾರು 4 ಹಂತಗಳಲ್ಲಿ ಕೊಯ್ಲು ಮಾಡಲಾದ ಅಡಕೆಯನ್ನು ಈಗ ಹೊಸ ಅಡಕೆಯಾಗಿ ಖರೀದಿಸಲಾಗುತ್ತದೆ. ಅದಕ್ಕಿಂತ ಹಿಂದಿನ ಸಾಲಿನ ಅಡಕೆಯನ್ನು ಹಳೆ ಅಡಕೆ ಸಿಂಗಲ್ ಚೋಲ್ ಎಂದೂ, ಅದಕ್ಕಿಂತಲೂ ಮೊದಲಿನ ಅಡಕೆಯನ್ನು ಹಳೆ ಅಡಕೆ ಡಬ್ಬಲ್ ಚೋಲ್ ಎಂದೂ ಖರೀದಿಸಲಾಗುತ್ತಿದೆ.

ದಶಕಗಳ ಹಿಂದೆ ಗಣೇಶ ಚತುರ್ಥಿ ಕಳೆದ ತಕ್ಷಣ ಹೊಸ ಅಡಕೆ ಮಾನದಂಡ ಮಾಯವಾಗಿ ಹಳೆ ಅಡಕೆಯಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿ ಮಾಯವಾಗಿದೆ. ಹೊಸ ಕೊಯ್ಲಿನ ಅಡಕೆ ಆವಕ ಆಗದ ಹೊರತು ಹಿಂದಿನ ಅಡಕೆಗೆ ಹಳತು ಸ್ಥಾನಮಾನ ಸಿಗುತ್ತಿಲ್ಲ. ಈ ಕ್ರಮದಿಂದಾಗಿ ಮಾರುಕಟ್ಟೆ ಸಂಸ್ಥೆಗಳು, ವ್ಯಾಪಾರಿಗಳಿಗೆ ಸಾಕಷ್ಟು ಲಾಭವಾಗುತ್ತದೆ ಎನ್ನುತ್ತಾರೆ ರೈತರು.

40ರಿಂದ 70 ದಿನಗಳ ಬಿಸಿಲಲ್ಲಿ ಕಾದ ಅಡಕೆ ಸೆಪ್ಟೆಂಬರ್‌ನಲ್ಲಿ ಖರೀದಿಸುವ ಹೊತ್ತಿಗೆ ಸಹಜವಾಗಿ ಹಳೆ ಅಡಕೆ ಸ್ವಾನಕ್ಕೇರಿದ್ದರೂ, ಹೊಸ ಅಡಕೆ ಎಂದೇ ಖರೀದಿಸಿ ದಾಸ್ತಾನು ಮಾಡಿಟ್ಟುಕೊಳ್ಳಲಾಗುತ್ತದೆ. ತಿಂಗಳ ಬಳಿಕ ಅದನ್ನೇ ಹಳೆ ಅಡಕೆ ಧಾರಣೆಗೆ ಮಾರುವ ಮೂಲಕ ಭರ್ಜರಿ ಲಾಭ ಮಾಡಿಕೊಳ್ಳಲಾಗುತ್ತದೆ ಎನ್ನುತ್ತಾರೆ ಬೆಳೆಗಾರರು.

ಕಳೆದ ಮಳೆಗಾಲಕ್ಕೆ ಹೋಲಿಸಿದಲ್ಲಿ ಈ ಬಾರಿ ಕೊಳೆ ರೋಗದ ಪ್ರಮಾಣ ಕಡಿಮೆ ಎಂಬ ಮಾಹಿತಿ ಇದೆ. ಜೂನ್ ತಿಂಗಳಲ್ಲಿ ಬೋರ್ಡೋ ಸಿಂಪಡಣೆಗೆ ಸಾಕಷ್ಟು ಅವಕಾಶವನ್ನು ಮುಂಗಾರು ಮಳೆ ಮಾಡಿಕೊಟ್ಟಿದ್ದ ಕಾರಣ ತುಲನಾತ್ಮಕವಾಗಿ ನೋಡಿದಲ್ಲಿ ಕೊಳೆ ರೋಗ, ಬೆಳೆ ನಷ್ಟ ಕಡಿಮೆ ಎಂದೇ ಹೇಳಲಾಗುತ್ತದೆ. ಆದರೆ ಇದೇ ವೇಳೆ ಅತಿಯಾದ ಮಳೆ, ಗಾಳಿಯಿಂದಾಗಿ ತೋಟ ನಷ್ಟವುಂಟಾಗಿದೆ.

ಧಾರಣೆ ನಿಗದಿ ಮಾಡಿಲ್ಲ

ಮಾರುಕಟ್ಟೆಗೆ ಹೊಸ ಕೊಯ್ಲಿನ ಅಡಕೆ ಆವಕ ಆಗಿಲ್ಲ, ಇನ್ನು ಕೆಲವು ದಿನಗಳ ಬಳಿಕ ಆಗುವ ನಿರೀಕ್ಷೆ ಇದೆ. ಈಗ ನಾವು ಹೊಸ ಕೊಯ್ಲಿನ ಅಡಕೆಗೆ ಧಾರಣೆ ನಿಗದಿ ಮಾಡಿಲ್ಲ, ಮುಂದಿನ ಕೆಲವೇ ದಿನಗಳಲ್ಲಿ ದರ ನಿಗದಿ ಮಾಡುತ್ತೇವೆ ಎಂದು ಕ್ಯಾಂಪ್ಕೋ ಅಧ್ಯಕ್ಷ ಕಿಶೋರ್ ಕೊಡ್ಗಿ ಹೇಳುತ್ತಾರೆ. ಅಕ್ಟೋಬರ್‌ನಲ್ಲಿ ಹೊಸ ಕೊಯ್ಲಿನ ಅಡಕೆ ಸಿದ್ಧಗೊಳ್ಳಲಿದೆ. ಸೋಲಾರ್ ಡ್ರೈಯರ್ ಇರುವವರಲ್ಲಿ ಈಗಲೂ ಸಣ್ಣ ಪ್ರಮಾಣದ ಹೊಸ ಕೊಯ್ಲಿನ ಅಡಕೆ ಸಂಗ್ರಹವಿದೆ. ಆದರೆ ಈಗ ಯಾರೂ ಮಾರಾಟಕ್ಕೆ ಮುಂದೆ ಬರುತ್ತಿಲ್ಲ, ಮುಂದಿನ ತಿಂಗಳಲ್ಲಿ ಆರಂಭಗೊಳ್ಳಬಹುದು. ಎಲ್ಲರೂ ಧಾರಣೆ ನಿಗದಿಗೆ ಕಾಯುತ್ತಿದ್ದಾರೆ. ಈ ಬಾರಿಯೂ ಕಳೆದ ವರ್ಷದಂತೆ ಆರಂಭಿಕ ಧಾರಣೆಯೇ 450 ರೂ. ಇರುವ ಸಂಭವವಿದೆ ಎಂದು ಪ್ರಶಸ್ತಿ ಪುರಸ್ಕೃತ ಕೃಷಿಕ ಕಡಮಜಲು ಸುಭಾಸ್ ರೈ ಹೇಳುತ್ತಾರೆ.

26.09.2022
Vijaya Karnataka p.05

26.09.2022
Samyuktha Karnataka p.05

ರೈತರ ಶೋಷಣೆ; ಗೊಬ್ಬರ ವರ್ತಕರಿಗೆ ನೊಟೀಸ್

ಸಂಯುಕ್ತ ಕರ್ನಾಟಕ ವರದಿ ಫಲಶೃತಿ

ಗದಗ : ಲಿಂಕ್ ಹೆಸರಿನಲ್ಲಿ ರೈತರ ಹಗಲು ದರೋಡೆ ಮಾಡುತ್ತಿದ್ದ ರಸಗೊಬ್ಬರ ಅಂಗಡಿಗಳ ಮಾಲಿಕರಿಗೆ ಕೃಷಿ ಇಲಾಖೆಯ ವಿಚಕ್ಷಣದಳ ಬಿಸಿ ಮುಟ್ಟಿಸಿದೆ. ನರಗುಂದದ ಮೂರು ಗೊಬ್ಬರ ಅಂಗಡಿಗಳಿಗೆ ಮುಂದಿನ 21 ದಿನಗಳವರೆಗೆ ಸ್ಟಾಕ್ ಮಾರಾಟ ಮಾಡದಂತೆ ನೊಟೀಸ್ ಜಾರಿ ಮಾಡಿದೆ.

ಡಿಎಪಿ ಗೊಬ್ಬರ ಖರೀದಿಸಲು ಇನ್ನೊಂದು ಗೊಬ್ಬರ ಖರೀದಿಯನ್ನು ಕಡ್ಡಾಯವಾಗಿಸಿ ರೈತರ ಶೋಷಣೆ ಮಾಡುತ್ತಿದ್ದ ಗೊಬ್ಬರ ಅಂಗಡಿಗಳ ಕರಾಮತ್ತಿನ ಬಗ್ಗೆ ಸಂಯುಕ್ತ ಕರ್ನಾಟಕ ದಿನಪತ್ರಿಕೆ ವಿಶೇಷ ವರದಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ರಸಗೊಬ್ಬರ ಅಂಗಡಿಗಳ ಮಾಲಿಕರು ರೈತರಿಗೆ ಡಿಎಪಿ ಗೊಬ್ಬರ ಖರೀದಿಯೊಂದಿಗೆ ಇನ್ನೊಂದು ಗೊಬ್ಬರವನ್ನು ಖರೀದಿಸುವದನ್ನು ಕಡ್ಡಾಯ ಗೋಳಿಸಿ ಶೋಷಣೆ ನಡೆಸಿದ್ದರು. ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗುತ್ತಲೇ ನರಗುಂದ ರಸಗೊಬ್ಬರ ಅಂಗಡಿಗಳಿಗೆ ಭೇಟಿ ನೀಡಿದ ಕೃಷಿ ವಿಚಕ್ಷಣ ವಿಭಾಗದ ಪ್ರಮೋದ ತುಂಬಳ ರೈತರಿಗೆ ಅನವಶ್ಯಕವಾಗಿ ಲಿಂಕ್ ಹೆಸರಿನಲ್ಲಿ ಶೋಷಣೆ ಮಾಡದಂತೆ ಎಚ್ಚರಿಸಿದ್ದರು. ಅಂಗಡಿಯಲ್ಲಿನ ಗೊಬ್ಬರದ ಸ್ಟಾಕ್ ಮಾರಾಟ ಮಾಡದಂತೆ ನೊಟೀಸ್ ಜಾರಿ ಮಾಡಿದ್ದಾರೆಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.

ರೈತರಿಗೆ ಲಿಂಕ್ ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದ ನರಗುಂದದ ಸಪ್ತಗಿರಿ ಅಗ್ರೋ, ಏಜೇನ್ಸಿ, ಅಭಿಷೇಕ ಅಗ್ರೋ, ಟ್ರೇಡರ್ಸ, ಲಕ್ಷ್ಮಿ ವಿಷ್ಣು ಟ್ರೇಡರ್ಸಗಳಿಗೆ ಮುಂದಿನ 21 ದಿನಗಳೊಂದಿಗೆ ಗೊಬ್ಬರ ಮಾರಾಟ ಮಾಡದಂತೆ ನೊಟೀಸ್ ನೀಡಲಾಗಿದೆ.
■ ಪ್ರಮೋದ ತುಂಬಳ
| ಕೃಷಿ ಇಲಾಖೆ ವಿಚಕ್ಷಣ ಅಧಿಕಾರಿ

ನರಗುಂದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಎಫ್.ತಹಸೀಲ್ದಾರ ಗೊಬ್ಬರದ ವರ್ತಕರೊಂದಿಗೆ ಸಭೆ ನಡೆಸಿ ಯಾವದೇ ಸಂದರ್ಭದಲ್ಲಿಯೂ ರೈತರಿಗೆ ಲಿಂಕ್ ಹೆಸರಿನಲ್ಲಿ ಡಿಎಪಿ ಗೊಬ್ಬರದೊಂದಿಗೆ ಇತರ ಗೊಬ್ಬರ ನೀಡುವಂತಿಲ್ಲ. ಒಂದು ವೇಳೆ ಲಿಂಕ್ ಹೆಸರಿನಲ್ಲಿ ಶೋಷಣೆ ಮುಂದುವರೆಸಿದ್ದಲ್ಲಿ ಗೊಬ್ಬರ ಮಾರಾಟದ ಲೈಸೇನ್ಸ ರದ್ದುಪಡಿಸುವದಾಗಿ ಎಚ್ಚರಿಸಿದ್ದಾರೆ.

ಏನಿದು ಲಿಂಕ್ : ರೈತರು ಡಿಎಪಿ ಗೊಬ್ಬರ ಖರೀದಿಗೆ ಗೊಬ್ಬರದ ಅಂಗಡಿಗೆ ತೆರಳಿದಾಗ ಕಡ್ಡಾಯವಾಗಿ ಮತ್ತೊಂದು ಗೊಬ್ಬರವನ್ನು ಖರೀದಿಸಿದಲ್ಲಿ ಮಾತ್ರವೇ ನೀಡುವದಾಗಿ ಹೇಳುತ್ತಿದ್ದರು. 50 ಕೆಜಿ ಡಿಎಪಿ ಗೊಬ್ಬರದೊಂದಿಗೆ ಹೆಚ್ಚುವರಿಯಾಗಿ 250ರೂಪಾಯಿಗಳ ನ್ಯಾನೋ ಗೊಬ್ಬರ ಅಥವಾ ಪೋಟ್ಯಾಷ್ ಗೊಬ್ಬರ ಖರೀದಿಸುವಂತೆ ಸೂಚಿಸಲಾಗುತ್ತಿತ್ತು. ಗೊಬ್ಬರ ಕಂಪನಿಗಳೇ ಈ ರೀತಿ ಯೋಜನೆ ರೂಪಿಸಿವೆ. ನ್ಯಾನೋ ಅಥವಾ ಪೋಟ್ಯಾಷ ಗೊಬ್ಬರ ಖರೀದಿಸದಿದ್ದಲ್ಲಿ ಡಿಎಪಿ ನೀಡುವದಿಲ್ಲವೆಂದು ವರ್ತಕರು ಖಡಾಖಂಡಿತವಾಗಿ ಹೇಳುತ್ತಿದ್ದಾರೆ. ಬೇರೆ ಜಿಲ್ಲೆಗಳಲ್ಲೂ ಇಂತಹ ಶೋಷಣೆ ನಡೆಯುತ್ತಿದೆ ಎಂಬ ಆರೋಪ ಕೇಳಿ ಬಂದಿದ್ದು ಈ ಬಗ್ಗೆ ಸರ್ಕಾರ ಗಮನಹರಿಸಬೇಕಿದೆ.

26.09.2022
Hosa Digantha p.02

ಉದ್ಯಮ ವಲಯ ಅಭಿವೃದ್ಧಿಯತ್ತ ನೀಲೇಶ್ವರ ಬ್ಲಾಕ್ ಪಂಚಾಯತ್ ದಾಪುಗಾಲು | ನೂರಾರು ಮಂದಿಗೆ ಉದ್ಯೋಗಾವಕಾಶ

ನುಗ್ಗೆ, ತುಳಸಿ ಎಲೆಗಳಿಂದ ಚಹಾದಂಥ ಪೇಯ ತಯಾರು

ಕಾಸರಗೋಡು: ಉದ್ಯಮ ವಲಯವನ್ನು ಉತ್ತೇಜಿಸುವ ಮತ್ತು ಆರೋಗ್ಯಕ್ಕೆ ಒತ್ತು ನೀಡುವ ವಿನೂತನ ಕಾರ್ಯ ಕ್ರಮದೊಂದಿಗೆ ಜಿಲ್ಲೆಯ ನೀಲೇಶ್ವರ ಬ್ಲಾಕ್ ಪಂಚಾಯತ್ ಸಮಗ್ರ ಯೋಜನೆಯನ್ನು ರೂಪಿಸಿದೆ.

ನೀಲೇಶ್ವರ ಬ್ಲಾಕ್ ಪಂಚಾಯತ್ ವತಿಯಿಂದ ತುಳಸಿ ಎಲೆಗಳು, ನುಗ್ಗೆ ಎಲೆ ಇತ್ಯಾದಿಗಳಿಂದ ಚಹಾ ಹುಡಿಯಂತೆ ಬಳಸಬಹುದಾದ ಪೇಯದ ಪ್ಯಾಕೆಟ್‌ಗಳನ್ನು ತಯಾರಿಸಲು ನಿರ್ಧರಿಸಲಾಗಿದೆ. ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಯೋಜನೆಯನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಕೃಷಿ ಇಲಾಖೆ ಮೂಲಕ ನುಗ್ಗೆ ಮತ್ತು ತುಳಸಿ ಸಸಿಗಳನ್ನು ವಿತರಿಸಲಾಗುತ್ತದೆ. ನುಗ್ಗೆ ಮತ್ತು ತುಳಸಿ ಎಲೆಗಳನ್ನು ಒಣಗಿಸಿ ರುಬ್ಬುವ ಮೂಲಕ ಚಹಾ ಪೇಯದಂತಹ ಪ್ಯಾಕೆಟ್ ತಯಾರಿಸಲಾಗುವುದು.

ತುಳಸಿ ಎಲೆಯ ರಸವನ್ನು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು, ರಕ್ತದೊತ್ತಡವನ್ನು ಕಡಿಮೆ ಮಾಡಲು, ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ಮತ್ತು ನೆಗಡಿ ಹಾಗೂ ಕೆಮ್ಮುಗಳಿಗೆ ಔಷಧಿಯಾಗಿ ಬಳಸಲಾಗುತ್ತದೆ. ಆದರೆ ತುಳಸಿ ಆಧಾರಿತ ಮೌಲ್ಯ ವರ್ಧಿತ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯವಿಲ್ಲ.



ಯೋಜನೆಗೆ ಸಹಾಯಧನ ಪಡೆಯಲು ನಿರ್ಧಾರ

ಯೋಜನೆಗೆ ಅಗತ್ಯವಿರುವ ಒಟ್ಟು ಮೊತ್ತದ ಶೇಕಡಾ 75ರಷ್ಟು ಮೊತ್ತವನ್ನು ಸಹಾಯಧನವಾಗಿ ಪಡೆಯಲಾಗುವುದು. ಯೋಜನೆಯನ್ನು ಪ್ರಾರಂಭಿಸಲು ಅಗತ್ಯ ತರಬೇತಿ ಮತ್ತು ತಾಂತ್ರಿಕ ನೆರವು ಸಿಪಿಸಿಆರ್‌ಐ ಮೂಲಕ ನೀಡಲಾಗುವುದು. ಅರ್ಜಿಗಳನ್ನು ಗ್ರಾಮಸಭೆಯ ಮೂಲಕ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.



ಬ್ಲಾಕ್ ಪಂಚಾಯತ್ ವ್ಯಾಪ್ತಿಯಲ್ಲಿ ಮೊದಲ ಹಂತದ ತರಬೇತಿ, ಸಸಿಗಳ ವಿತರಣೆಗೆ 4 ಲಕ್ಷ ರೂ. ಮೀಸಲಿಡಲಾಗಿದ್ದು, ಆಸಕ್ತರಿಂದ ಅರ್ಜಿ ಆಪೇಕ್ಷಿಸಲಾಗಿದೆ. ಬಳಿಕ ಸಿಪಿಸಿಆರ್‌ಐ ಮೂಲಕ ತರಬೇತಿ ನೀಡಲಾಗುತ್ತದೆ. ಉತ್ಪನ್ನವನ್ನು ಸಿಪಿಸಿಆರ್‌ಐ ಸಹಿತ ಇತರ ಏಜೆನ್ಸಿಗಳ ಮೂಲಕ ಮಾರಾಟ ಮಾಡಲಾಗುವುದು. ಜನರು ಕೈಜೋಡಿಸಿ ಯಶಸ್ವಿಗೊಳಿಸಬೇಕಾಗಿದೆ.

■ ಮಾಧವನ್ ಮಣಿಯರ, ಅಧ್ಯಕ್ಷರು, ನೀಲೇಶ್ವರ ಬ್ಲಾಕ್ ಪಂಚಾಯತ್

ನುಗ್ಗೆ ಮೌಲ್ಯವರ್ಧಿತ ಉತ್ಪನ್ನ: ನುಗ್ಗೆಯು ನೀಲೇಶ್ವರ ಬ್ಲಾಕ್‌ನಲ್ಲಿ ವ್ಯಾಪಕವಾಗಿ ಬೆಳೆಸಲಾಗುವ ಸ್ಯವಾಗಿದೆ. ಪ್ರಸ್ತುತ ನುಗ್ಗೆ ಎಲೆ ಮತ್ತು ಅದರ ಕೊಂಬು (ನುಗ್ಗೆ ಕೊಂಬು) ನೇರವಾಗಿ ಆಹಾರ ಪದಾರ್ಥವಾಗಿ ಬಳಸಲಾಗುತ್ತಿದೆ. ನುಗ್ಗೆ ಎಲೆಗಳು ಕೊಬ್ಬು ಮುಕ್ತ ಮಾತ್ರವಲ್ಲದೆ ವಿಟಮಿನ್ ಎ, ಸಿ, ಕ್ಯಾಲ್ಸಿಯಂ, ಕಬ್ಬಿಣ ಮತ್ತು ಥಯಾಮಿನ್‌ಗಳಲ್ಲಿ ಸಮೃದ್ಧವಾಗಿವೆ. ಆದ್ದರಿಂದ ನುಗ್ಗೆ ಎಲೆಗಳನ್ನು ತುಂಬಾ ಆರೋಗ್ಯಕರ ಆಹಾರವೆಂದು ಪರಿಗಣಿಸಲಾಗುತ್ತಿದೆ. ಮಧುಮೇಹ, ಕ್ಯಾನ್ಸರ್ ಮುಂತಾದ ಕಾಯಿಲೆಗಳನ್ನು ನಿಯಂತ್ರಿಸಲು ಸಹ ಇದನ್ನು ಬಳಸಲಾಗುವುದು. ಈ ಹಿನ್ನೆಲೆಯಲ್ಲಿ ನುಗ್ಗೆಯನ್ನು ಮೌಲ್ಯವರ್ಧಿತ ಉತ್ಪನ್ನವಾಗಿಸಿ ಮಾರುಕಟ್ಟೆಗೆ ತರುವುದು ಗುರಿಯಾಗಿದೆ.

ಕೃಷಿಕರಿಗೆ ಸಹಾಯವಾಗುವ ಯೋಜನೆ: ಟೀ ಬ್ಯಾಗ್ ಯೋಜನೆಯ ಮೂಲಕ ನುಗ್ಗೆ ಮತ್ತು ತುಳಸಿ ಎಲೆಗಳ ಮೌಲ್ಯವನ್ನು ಹೆಚ್ಚಿಸುವ ಮತ್ತು ಆ ಮೂಲಕ ಕೃಷಿಕರಿಗೆ ಹೆಚ್ಚಿನ ಮಾರುಕಟ್ಟೆಯನ್ನು ಖಚಿತಪಡಿಸಿಕೊಳ್ಳುವ ಗುರಿ ಹೊಂದಲಾಗಿದೆ. ಕೃಷಿ ಇಲಾಖೆಯ ಸಹಯೋಗದಲ್ಲಿ ಬ್ಲಾಕ್ ವ್ಯಾಪ್ತಿಯ ಪಂಚಾಯತ್‌ಗಳಲ್ಲಿ ನುಗ್ಗೆ ಮತ್ತು ತುಳಸಿ ಸಸಿಗಳನ್ನು ವಿತರಿಸುವ ಮೂಲಕ ಟೀ ಬ್ಯಾಗ್ ತಯಾರಿಕೆಗೆ ಮುಂದೆ ಬರುವ ಉದ್ಯಮಿಗಳನ್ನು ಆಕರ್ಷಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಈ ವೇಯದ ಆರೋಗ್ಯ ಪ್ರಯೋಜನಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲಾಗುವುದು. ತಲಾ ಇಬ್ಬರು ಸದಸ್ಯರಿರುವ ಎರಡು ಮಹಿಳಾ ಗುಂಪುಗಳಿಗೆ ಪ್ರೋತ್ಸಾಹಧನವಾಗಿ ಆರ್ಥಿಕ ನೆರವು ನೀಡಲು ಉದ್ದೇಶಿಸಲಾಗಿದೆ. ಕೈಗಾರಿಕಾ ಇಲಾಖೆಯ ಸಹಯೋಗದಲ್ಲಿ ಬ್ಲಾಕ್ ಪಂಚಾಯತ್ 4 ಲಕ್ಷ ರೂ.ಗಳನ್ನು ಯೋಜನೆಗೆ ಮೀಸಲಿಟ್ಟಿದೆ. ಬ್ಲಾಕ್ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ವಾಸಿಸುತ್ತಿರುವ 18 ರಿಂದ 59 ವರ್ಷ ವಯಸ್ಸಿನ ನಿರುದ್ಯೋಗಿಗಳು ವ್ಯಾಪಾರವನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಾಮಾನ್ಯ ವರ್ಗಕ್ಕೆ ಸೇರಿದ ಕುಟುಂಬದ ವಾರ್ಷಿಕ ಆದಾಯ 5 ಲಕ್ಷ ರೂ. ಮೀರಬಾರದು. ಈ ಹಿಂದೆ ಸರಕಾರದ ಇತರ ಯೋಜನೆಗಳಿಂದ ಪ್ರಯೋಜನ ಪಡೆಯದವರಾಗಿರಬೇಕು.

26.09.2022
Hosa Digantha p.03

ಗಿರಿಶ್ರೇಣಿಯ ಹಸಿರು ಪರ್ವತಗಳಿಗೆ ನೀಲಿ ಹೊದಿಕೆ

ಪ್ರವಾಸಿಗರನ್ನು ಸೆಳೆದ ಕುರಂಜಿ

• ಸುರೇಶ್ ಚಿಕ್ಕಮಗಳೂರು

ಚಿಕ್ಕಮಗಳೂರು: ಗಿರಿಶ್ರೇಣಿಯ ಹಸಿರು ಪರ್ವತಗಳಿಗೆ ನೀಲಿ ಹೊದಿಕೆಯನ್ನು ಹಾಸಿರುವ ಕುರಂಜಿ ಹೂಗಳು ಪ್ರವಾಸಿಗರನ್ನು ಮಂತ್ರಮುಗ್ಧಗೊಳಿಸಿದ್ದು, ಪ್ರತಿನಿತ್ಯ ಸಹಸ್ರಾರು ಜನರನ್ನು ಆಕರ್ಷಿಸುತ್ತಿದೆ.

ಕಳೆದ ಒಂದೂವರೆ ತಿಂಗಳಿನಿಂದ ಚಂದ್ರದ್ರೋಣ ಪರ್ವತಸಾಲನ್ನು ಆವರಿಸಿಕೊಂಡಿರುವ ನೀಲ ಕುರಂಜಿಯ ಸೊಬಗನ್ನು ಕಣ್ತುಂಬಿಕೊಳ್ಳಲು ಸಾಲು ಸಾಲು ಪ್ರವಾಸಿಗರ ದಂಡು ಬೆಟ್ಟ ಪ್ರದೇಶಕ್ಕೆ ದಾಂಗುಡಿ ಇಡುತ್ತಿದೆ.

12 ವರ್ಷಗಳಿಗೊಮ್ಮೆ ಘಟಿಸುತ್ತದೆ ಎನ್ನಲಾಗುವ ನಿಸರ್ಗದ ವಿಸ್ಮಯ ಸಸ್ಯಶಾಸ್ತ್ರದ ವಿಜ್ಞಾನಿಗಳು, ಸಂಶೋಧಕರು, ವಿದ್ಯಾರ್ಥಿಗಳಿಗೆ ಅತ್ಯಂತ ಆಸಕ್ತಿದಾಯಕ ವಿಷಯವಾಗಿದೆ. ಪ್ರವಾಸಿಗರ ಪಾಲಿಗೆ ಇದೊಂದು ಕೌತುಕವಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಗಿರಿ ತಪ್ಪಲಿಗೆ ನೂರಾರು ಉಪನ್ಯಾಸಕರು, ಸಂಶೋಧಕರು ಹಾಗೂ ಸಸ್ಯಶಾಸ್ತ್ರದ ವಿದ್ಯಾರ್ಥಿಗಳು ರಾಜ್ಯ ಹಾಗೂ ಹೊರರಾಜ್ಯಗಳಿಂದ ಭೇಟಿನೀಡಿ ಪ್ರಕೃತಿಯಲ್ಲಡಗಿರುವ ನಿಗೂಢತೆಯನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ.

ಸಂಚಾರ ದಟ್ಟಣೆ: ಹಲವು ದಶಕಗಳ ನಂತರ, ಗಿರಿಶ್ರೇಣಿ, ಮಲೆನಾಡು ಅಪಾರಮಳೆಯನ್ನು ಕಂಡಿದೆ. ಇದರನಡುವೆಯೇ ಗಿರಿತಪ್ಪಲು ಕುರಂಜಿಯಿಂದಾಗಿ ನೀಲಮಯವಾಗಿದೆ.



ಮುಂಜಾಗ್ರತೆ ಅಗತ್ಯ

ಜಿಲ್ಲಾಡಳಿತ, ಅರಣ್ಯ ಇಲಾಖೆ ಈ ವಿಚಾರದಲ್ಲಿ ಮುಂಜಾಗ್ರತೆ ವಹಿಸಬೇಕಿತ್ತು. ಕುರಂಜಿ ಹೂಗಳು ಹೆಚ್ಚೆಂದರೆ ಇನ್ನು 15 ದಿನಗಳಷ್ಟೇ ಕಾಣಲು ಸಾಧ್ಯ. ಮುಂದೆ ಸಾಲು ಸಾಲು ರಜೆಗಳು ಇರುವುದರಿಂದ ಬಹಳಷ್ಟು ಪ್ರವಾಸಿಗರು ಇಲ್ಲಿಗೆ ಭೇಟಿ ಕೊಡಲು ಯೋಜನೆ ರೂಪಿಸಿಕೊಂಡಿದ್ದಾರೆ. ಆವರಿಗಾಗಿ ಈ ಪುಷ್ಪರಾಶಿ ಉಳಿಯಬೇಕಾಗುತ್ತದೆ. ಈ ಕಾರಣಕ್ಕೆ ಎಲ್ಲಾ ಪ್ರವಾಸಿಗರೂ ಹೂವನ್ನು, ಸಸ್ಯಗಳನ್ನು ನೋಯಿಸದೆ ಸೊಬಗನ್ನು ಆಸ್ವಾದಿಸಬೇಕು ಎಂದು ಮನವಿ ಮಾಡಿದ್ದಾರೆ.